ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ/ಶೈವಿ/122/ IDP/2023-24

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಶೇಷಾದ್ರಿ ರಸ್ತೆ, ಬೆಂಗಳೂರು-560001.
ದಿನಾಂಕ : 07.11.203.

**ಸುತ್ತೋಲೆ**

ವಿಷಯ : 2023-24 ನೇ ಸಾಲಿನ ಕಾಲೇಜಿನ ಸಾಂಸ್ಥಿಕ ಯೋಜನಾ ಸಮಿತಿಯನ್ನು ರಚಿಸಿ ಕ್ರಿಯಾಯೋಜನೆಯನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ : 1. ಸರ್ಕಾರದ ಆದೇಶ ಸಂಖ್ಯೆ: ಇಡಿ 33 ಹೆಚ್‌ಪಿಇ 2022, ದಿನಾಂಕ:14.07.2022.
2. ಸರ್ಕಾರದ ತಿದ್ದುಪಡಿ/ಸೇರ್ಪಡೆ ಆದೇಶ ಸಂಖ್ಯೆ: ಇಡಿ 33 ಹೆಚ್‌ಪಿಇ 2022, ದಿನಾಂಕ: 03.04.2023.
3. ಈ ಕಛೇರಿಯ ಆದೇಶ ಸಂಖ್ಯೆ : ಕಾಶಿಇ/ಶೈವಿ/113/ಐಡಿಪಿ ಅನುಮೋದನೆ/2022-23, ದಿನಾಂಕ : 24.11.2023 ಹಾಗೂ 21.07.2023.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಆದೇಶಗಳಲ್ಲಿ, 2022-23ನೇ ಸಾಲಿನಿಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಂಗ್ರಹಿಸಲಾಗುವ ಸರ್ಕಾರಿ ಶುಲ್ಕಗಳು ಸೇರಿದಂತೆ ಎಲ್ಲಾ ಶುಲ್ಕಗಳನ್ನು ಉಲ್ಲೇಖ-1ರಲ್ಲಿನ ಉದ್ದೇಶಗಳಿಗಾಗಿ ಬಳಸಿಕೊಳ್ಳಲು ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ವಾರ್ಷಿಕ ಸಾಂಸ್ಥಿಕ ಅಭಿವೃದ್ಧಿ ಯೋಜನೆಯ (Institutional Development Plan - IDP) ಸಮಿತಿಯನ್ನು ರಚಿಸಿ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಆಯುಕ್ತಾಲಯಕ್ಕೆ ಸಲ್ಲಿಸುವಂತೆ ಸೂಚಿಸಲಾಗಿದೆ.

ಈ ಸಂಬಂಧ, 2023-24 ನೇ ಶೈಕ್ಷಣಿಕ ಸಾಲಿಗೆ ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ IDP ಸಮಿತಿಯನ್ನು ರಚಿಸಿ, ಕಾಲೇಜಿನಲ್ಲಿ ಸಂಗ್ರಹಿಸಲಾಗಿರುವ ವಿವಿಧ ಶುಲ್ಕಗಳನ್ನು ಸರ್ಕಾರಿ ಆದೇಶದಲ್ಲಿ ತಿಳಿಸಿರುವಂತೆ ಆದ್ಯತೆಯ ಮೇರೆಗೆ ಈ ಕೆಳಕಂಡ ಮೂಲಭೂತ ಸೌಕರ್ಯ/ ನಿರ್ವಹಣೆಗೆ ಬಳಸಿಕೊಳ್ಳಲು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲು ಸೆಪ್ಟಂಬರ್ ಮಾಹೆಯಲ್ಲೇ ತಿಳಿಸಲಾಗಿತ್ತು.

- ಕಟ್ಟಡ ನಿರ್ವಹಣೆ ಮತ್ತು ದುರಸ್ಥಿ, ಶೌಚಾಲಯ ನಿರ್ವಹಣೆ ಮತ್ತು ವಿದ್ಯುತ್ ದುರಸ್ಥಿ, ಕಾಲೇಜು ಕಟ್ಟಡಗಳ ಸುಣ್ಣ ಬಣ್ಣ, ಕಿಟಕಿ ಮತ್ತು ಬಾಗಿಲುಗಳ ದುರಸ್ಥಿ
- ಕುಡಿಯುವ ನೀರಿನ ಸೌಲಭ್ಯ
- ಪೀಠೋಪಕರಣಗಳ ಖರೀದಿ ಮತ್ತು ದುರಸ್ಥಿ, ಪ್ರಯೋಗಾಲಯಗಳ ಉಪಕರಣಗಳ ಖರೀದಿ, ಕನ್ಸ್ಯೂಮೆಬಲ್ಸ್ ಮತ್ತು ಕೆಮಿಕಲ್ಸ್ ಖರೀದಿ, ಇಂಟರ್‌ನೆಟ್ ಸೌಲಭ್ಯ
- ಗ್ರಂಥಾಲಯ ಪುಸ್ತಕ ಖರೀದಿ ಮತ್ತು ದುರಸ್ಥಿ
- ಕ್ರೀಡಾ ಉಪಕರಣಗಳ ಖರೀದಿ ಮತ್ತು ದುರಸ್ಥಿ
- ಕಾಲೇಜಿನ ಅವಶ್ಯಕತೆಗೆ ತಕ್ಕಂತೆ ಅಗತ್ಯವಿರುವ ಇತರೆ ಸಾಮಾಗ್ರಿಗಳ ಖರೀದಿ ಹಾಗೂ ಇತರೆ ವೆಚ್ಚಗಳು

ಮುಂದುವರೆದು, ಸಿದ್ಧಪಡಿಸಿದ ಕ್ರಿಯಾಯೋಜನೆಯ ಮಾಹಿತಿಯನ್ನು E-MIS ನಲ್ಲಿ ಲಭ್ಯವಿರುವ Table ಗಳ ಎಲ್ಲಾ ಕಾಲಂಗಳಲ್ಲಿ ಭರ್ತಿ ಮಾಡಿ, Submit ಮಾಡುವುದು. ನಂತರ, Submit ಮಾಡಿರುವ ಮಾಹಿತಿಯನ್ನು, Download ಮಾಡಿಕೊಂಡು ಸದರಿ ಪ್ರತಿಯನ್ನು ಪ್ರಾಂಶುಪಾಲರ ಸಹಿಯೊಂದಿಗೆ Covering letter ನೊಂದಿಗೆ ಅಡಕಗೊಳಿಸಿ ಕಡ್ಡಾಯವಾಗಿ ದಿನಾಂಕ : 18.11.2023 ರ ಒಳಗೆ ಈ ಕಛೇರಿಗೆ ತಲುಪಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.

ಸೂಚನೆ :

1. ಹಿಂದಿನ ವರ್ಷಗಳಲ್ಲಿ (2022-23ನೇ ಸಾಲು ಹಾಗೂ ಅದರ ಹಿಂದಿನ ಎಲ್ಲಾ ವರ್ಷಗಳು ಒಳಗೊಂಡಂತೆ) ಜಮಾ ಆಗಿ ಉಳಿಕೆ ಆಗಿರುವ ಮೊತ್ತ (ಸರ್ಕಾರಕ್ಕೆ ಸಲ್ಲಬೇಕಾದ ಬಡ್ಡಿ ಮೊತ್ತ, ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕಾದ ಮೊತ್ತ, ವಿದ್ಯಾರ್ಥಿವೇತನ ಉಳಿಕೆ ಮೊತ್ತವನ್ನು ಹೊರತುಪಡಿಸಿ) 2022-23 ನೇ ಸಾಲಿನಲ್ಲಿ ಐ.ಡಿ.ಪಿ ಮೂಲಕ ಅನುಮೋದನೆಗೊಂಡು ಇಲಾಖಾ ವತಿಯಿಂದ ಖರೀದಿ ಪ್ರಕ್ರಿಯೆ ಬಾಕಿ ಇರುವ ಅನುದಾನದ ಮೊತ್ತವನ್ನು ಸೇರಿದಂತೆ (ಪೀಠೋಪಕರಣಗಳ ಖರೀದಿಗೆ ಈ ಕಛೇರಿಯ ಕಾರ್ಯಾದೇಶ ಸಂಖ್ಯೆ : ಕಾಶಿಇ/ಶೈವಿ/113/ಐ.ಡಿ.ಪಿ/2022-23, ದಿನಾಂಕ : 25.07.2023 ರಲ್ಲಿ ಕಾರ್ಯಾದೇಶ ನೀಡಿರುವುದನ್ನು ಹೊರತುಪಡಿಸಿ)
2. 2023-24 ನೇ ಸಾಲಿನಲ್ಲಿ ಇಲ್ಲಿಯವರೆಗೂ ಸಂಗ್ರಹವಾಗಿರುವ ಮೊತ್ತ.
3. 2023-24 ನೇ ಸಾಲಿನ ಪದವಿ/ ಸ್ನಾತಕೋತ್ತರ ವಿದ್ಯಾರ್ಥಿಗಳಿಂದ ಸಂಗ್ರಹಿಸಬಹುದಾಗಿರುವ ಎಲ್ಲಾ ಶುಲ್ಕಗಳ ಅಂದಾಜು ಮೊತ್ತವನ್ನೊಳಗೊಂಡಂತೆ ಕ್ರ.ಸಂ 1 ರಿಂದ 3 ರ ವರೆಗಿನ ಮೊತ್ತಕ್ಕೆ ಐ.ಡಿ.ಪಿ ಸಿದ್ಧಪಡಿಸುವುದು.

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ:

1. ರಾಜ್ಯದ ಎಲ್ಲಾ ಸರ್ಕಾರಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಸೂಕ್ತ ಕ್ರಮಕ್ಕಾಗಿ.

ಪ್ರತಿಯನ್ನು :

1. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಕಲಬುರಗಿ –ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು.
3. ಕಛೇರಿ ಪ್ರತಿ.